**ಕರ್ನಾಟಕ ವಿಧಾನ ಪರಿಷತ್ತು**

ಲಘು ಪ್ರಕಟಣೆ ಭಾಗ –2

(ಸಾಂಸದಿಕ ಹಾಗೂ ಇತರೆ ವಿಷಯಗಳಿಗೆ ಸಂಬಂಧಿಸಿದ ಸಾಮಾನ್ಯ ಮಾಹಿತಿ)

**ಶನಿವಾರ, ದಿನಾಂಕ: 20ನೇ ಜೂನ್, 2020**

**ಸಂಖ್ಯೆ: 62**

ವಿಧಾನ ಪರಿಷತ್ತಿನ 140ನೆಯ ಅಧಿವೇಶನದಲ್ಲಿ ದಿನಾಂಕ:11.03.2020ರಂದು ಮಾನ್ಯ ಶಾಸಕರಾದ ಶ್ರೀ ಹೆಚ್.ಎಂ.ರೇವಣ್ಣ ಅವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ:100(812)ರಲ್ಲಿ ಬೃಹತ್ ಬೆಂಗಳೂರು ಮಹಾನಗರ ವ್ಯಾಪ್ತಿಯಲ್ಲಿರುವ ಕ್ಲಬ್‌ಗಳಿಗೆ ಸರ್ಕಾರದ ವತಿಯಿಂದ ಮಂಜೂರು ಮಾಡಿರುವ ನಿವೇಶನಗಳ ವಿವರ, ಕ್ಲಬ್‌ಗಳಲ್ಲಿ ಸದಸ್ಯತ್ವವನ್ನು ಹೊಂದಲು ನಿಗದಿಪಡಿಸಿರುವ ಅರ್ಹತೆ ಹಾಗೂ ವಸ್ತ್ರ ಸಂಹಿತೆ ಕುರಿತು ಸದನದಲ್ಲಿ ಪ್ರಸ್ತಾಪಿಸಿದ ಹಿನ್ನಲೆಯಲ್ಲಿ ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 242(ಎ)ರ ರೀತ್ಯಾ ಈ ಬಗ್ಗೆ ಪರಿಶೀಲಿಸಿ ವರದಿಯನ್ನು ಸಲ್ಲಿಸಲು ವಿಶೇಷ ಸದನ ಸಮಿತಿಯನ್ನು **ಶ್ರೀ ಎನ್. ರವಿಕುಮಾರ್** ಅವರ ಅಧ್ಯಕ್ಷತೆಯಲ್ಲಿ ಈ ಕೆಳಕಂಡ **08** ಸದಸ್ಯರನ್ನೊಳಗೊಂಡಂತೆ ರಚಿಸಲಾಗಿರುತ್ತದೆ. ಸಮಿತಿಯು ಮೂರು ತಿಂಗಳ ಅವಧಿಯೊಳಗೆ ವರದಿಯನ್ನು ಸಲ್ಲಿಸುವುದು.

**ಶ್ರೀಯುತರುಗಳಾದ:**

| | | |
|---|---|---|
| **01.** | **ಎನ್. ರವಿಕುಮಾರ್** | **ಅಧ್ಯಕ್ಷರು** |
| **02.** | **ಬಸವರಾಜ ಶಿವಲಿಂಗಪ್ಪ ಹೊರಟ್ಟಿ** | **ಸದಸ್ಯರು** |
| **03.** | **ಕೆ.ಸಿ.ಕೊಂಡಯ್ಯ** | **ಸದಸ್ಯರು** |
| **04.** | **ಡಾ:ತೇಜಸ್ವಿನಿಗೌಡ** | **ಸದಸ್ಯರು** |
| **05.** | **ಡಾ:ವೈ.ಎ.ನಾರಾಯಣಸ್ವಾಮಿ** | **ಸದಸ್ಯರು** |
| **06.** | **ಪ್ರಕಾಶ್ ಕೆ.ರಾಥೋಡ್** | **ಸದಸ್ಯರು** |
| **07.** | **ಕೆ.ಗೋವಿಂದರಾಜು** | **ಸದಸ್ಯರು** |
| **08.** | **ಎಸ್.ಎಲ್.ಭೋಜೇಗೌಡ** | **ಸದಸ್ಯರು** |
| **09.** | **ಯು.ಬಿ.ವೆಂಕಟೇಶ್** | **ಸದಸ್ಯರು** |

**ಸಮಿತಿಯ ಪರಿಶೀಲನಾಂಶಗಳು**

1. ಮನರಂಜನಾ ಕ್ಲಬ್‌ಗಳಿಗೆ ಬಿ.ಡಿ.ಎ/ ಬಿ.ಬಿ.ಎಂ.ಪಿ./ಕೆ.ಹೆಚ್.ಬಿ ಅಥವಾ ಇತರೆ ಸರ್ಕಾರಿ ಸಂಸ್ಥೆಗಳಿಂದ ನಿವೇಶನವನ್ನು ಲೀಸಿನ ಆಧಾರದಲ್ಲಿ ನೀಡುತ್ತಿದ್ದು ಲೀಸಿನ ಕರಾರಿನನ್ವಯ ಕಾರ್ಯನಿರ್ವಹಿಸುತ್ತಿರುವ ಕುರಿತು ಹಾಗೂ ಲೀಸಿಗೆ ನೀಡಿರುವ ಮೊತ್ತದ ಬಗ್ಗೆ ಪರಿಶೀಲಿಸುವ ಕುರಿತು.

2. ಮನರಂಜನಾ ಕ್ಲಬ್‌ಗಳು ಕಾರ್ಯನಿರ್ವಹಿಸಲು ಅಬಕಾರಿ, ವಿದ್ಯುತ್ ಹಾಗೂ ಇತರೆ ಪರವಾನಗಿಗಳನ್ನು ಪಡೆಯುತ್ತಿದ್ದು, ಪರವಾನಗಿ ಕರಾರಿನನ್ವಯ ಕಾರ್ಯನಿರ್ವಹಿಸುತ್ತಿರುವುದನ್ನು ಪರಿಶೀಲಿಸುವ ಕುರಿತು.

3. ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ 1960ರ ರೀತ್ಯಾ ಪ್ರತಿ ವರ್ಷ ವಾರ್ಷಿಕ ಮಹಾಸಭೆ ನಡವಳಿ ಹಾಗೂ ಆಸ್ತಿ–ಜವಾಬ್ದಾರಿ ತ:ಖ್ತೆಗಳನ್ನು ಸಲ್ಲಿಸುವುದು ಕಡ್ಡಾಯವಾಗಿದ್ದು ಇದನ್ನು ಪಾಲಿಸಿರುವ ಬಗ್ಗೆ ಪರಿಶೀಲಿಸುವುದು.

4. ಸದಸ್ಯತ್ವ ಶುಲ್ಕದ ಬಗ್ಗೆ ಪರಿಶೀಲನೆ.

5. ರಾಜ್ಯದ ಯಾವುದೇ ಕ್ಲಬ್‌ಗಳು ನಮ್ಮ ಸಂಸ್ಕೃತಿ ಮತ್ತು ಪರಂಪರೆಯ ಸಾಂಪ್ರದಾಯಿಕ ವಸ್ತ್ರಗಳನ್ನು ನಿಷೇಧಿಸದೆ ಸಾಮಾನ್ಯ ನಾಗರೀಕ ಮರ್ಯಾದತ್ತವಾಗಿ ತೊಡುವ ಉಡುಗೆ ಧರಿಸಿ ಕ್ಲಬ್‌ಗಳಿಗೆ ಪ್ರವೇಶಿಸುವ ಅವಕಾಶ ಹೊಂದಿರುವಂತಹ ನಿಯಮಗಳನ್ನು ಅಳವಡಿಸಿಕೊಳ್ಳುವಂತೆ ಎಲ್ಲಾ ಕ್ಲಬ್‌ಗಳಿಗೆ ಕಟ್ಟುನಿಟ್ಟಿನ ಸೂಚನೆಯನ್ನು ನೀಡಬೇಕೆಂಬುದನ್ನು ವಿಧೇಯಕದಲ್ಲಿ ಅಳವಡಿಸಿಕೊಳ್ಳುವ ಕುರಿತು.

6. ಸದಸ್ಯತ್ವ ಶುಲ್ಕ ನಿಗಧಿಪಡಿಸುವುದಕ್ಕೆ ಸಂಬಂಧಿಸಿದಂತೆ ಲಾಭದ ಉದ್ದೇಶವಿರದ ಎಲ್ಲಾ ಕ್ಲಬ್‌ಗಳಿಗೆ ಸರ್ಕಾರವು ಸೂಕ್ತ ಮಾನದಂಡ ಅಳವಡಿಸಬೇಕೆಂದು ಮತ್ತು ಸಕ್ಷಮ ಪ್ರಾಧಿಕಾರಿಯು ಪ್ರತಿಯೊಂದು ಕ್ಲಬ್‌ನ ಸದಸ್ಯತ್ವ ಶುಲ್ಕವನ್ನು ನಿಗದಿಪಡಿಸುವ ಬಗ್ಗೆ ಪರಿಶೀಲಿಸುವುದು.

7. ಸರ್ಕಾರದಿಂದ ವಿನಾಯಿತಿ ದರದಲ್ಲಿ ಜಮೀನು ಅಥವಾ ಇತರೆ ಸವಲತ್ತು ಪಡೆದಿರುವ ಕ್ಲಬ್‌ಗಳಲ್ಲಿ ಆಯಾಯ ಕ್ಷೇತ್ರವಾರು ಜನಪ್ರತಿನಿಧಿಗಳು ( ಎಂ.ಪಿ., ಎಂ.ಎಲ್.ಎ., ಹಾಗೂ ಎಂ.ಎಲ್.ಸಿ) ಸದಸ್ಯರಾಗಬಯಸಿದಲ್ಲಿ ಅಂತಹ ಜನಪ್ರತಿನಿಧಿಗಳಿಗೆ ಸದಸ್ಯತ್ವವನ್ನು ( Membership ) ಅವರುಗಳು ಬಯಸುವ ಎರಡು ಕ್ಲಬ್‌ಗಳಲ್ಲಿ ಮಾತ್ರ ನೀಡುವ ಕುರಿತು ಪರಿಶೀಲಿಸುವುದು.

8. ಕ್ರೀಡಾ ರಂಗದಲ್ಲಿ ಮಹೋನ್ನತ ಸಾಧನೆ ಮಾಡಿ ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಪ್ರತಿಷ್ಠಿತ ಪ್ರಶಸ್ತಿಗಳನ್ನು ಪಡೆದ ಕ್ರೀಡಾಪಟುಗಳಿಗೆ ಹಾಗೂ ಶೌರ್ಯ ಪ್ರಶಸ್ತಿಯನ್ನು ಪಡೆದ ಮಾಜಿ ಸೈನಿಕರಿಗೆ ಆಯಾ ಪ್ರದೇಶಗಳಲ್ಲಿರುವ ಅವರು ಬಯಸಿದ ಸರ್ಕಾರದಿಂದ ವಿನಾಯಿತಿ

ದರದಲ್ಲಿ ಜಮೀನು ಅಥವಾ ಇತರೆ ಸವಲತ್ತು ಪಡೆದಿರುವ ಯಾವುದಾದರೂ ಒಂದು ಕ್ಲಬ್‌ನ ಸದಸ್ಯತ್ವ ನೀಡುವ ಬಗ್ಗೆ ಪರಿಶೀಲಿಸುವುದು.

9. ವಿಧಾನ ಸಭೆಯ ಹಾಲಿ ಮತ್ತು ಮಾಜಿ ಸದಸ್ಯರುಗಳ ಉಪಯೋಗಕ್ಕಾಗಿ ಸ್ಥಾಪಿಸಲಾಗಿರುವ ಸಾಂವಿಧಾನಿಕ ಕ್ಲಬ್ (Constitutional Club ) ಜರೂರಾಗಿ ಕಾರ್ಯನಿರ್ವಹಿಸುವುದಕ್ಕಾಗಿ ಸ್ಥಳಾವಕಾಶವು ಸೇರಿದಂತೆ ಎಲ್ಲಾ ಅಗತ್ಯ ಕ್ರಮಗಳನ್ನು ತುರ್ತಾಗಿ ಒದಗಿಸಿ, ಪ್ರಸ್ತುತ ವರ್ಷದಿಂದಲೇ ಅದು ಕಾರ್ಯಾರಂಭ ಮಾಡಲು ಕ್ರಮ ಕೈಗೊಳ್ಳುವ ಬಗ್ಗೆ ಪರಿಶೀಲಿಸುವುದು.

10. ಕರ್ನಾಟಕ ಸಾಂವಿಧಾನಿಕ ಕ್ಲಬ್ (Constitutional Club of Karnataka ) ಅನ್ನು ಸ್ಥಾಪಿಸಿದ ನಂತರ ಭಾರತ ಸಾಂವಿಧಾನಿಕ ಕ್ಲಬ್ (Constitutional Club of India ) ನೊಂದಿಗೆ ಒಡಂಬಡಿಕೆ ಮಾಡಿಕೊಳ್ಳುವುದು ಹಾಗೂ ಈ ಕ್ಲಬ್‌ನ್ನು ಭಾರತ ಸಾಂವಿಧಾನಿಕ ಕ್ಲಬ್‌ನ ಸಂಯೋಜನೆ ಪಡೆದು ಅದರ ಸಹಯೋಗದಲ್ಲಿ ಒಂದು ಜಂಟಿ ಉದ್ಯಮವಾಗಿ ನಡೆಸುವ ಬಗ್ಗೆ ಪರಿಶೀಲಿಸುವುದು.

11. ರಾಜ್ಯದಲ್ಲಿರುವ ಎಲ್ಲಾ ಕ್ಲಬ್‌ಗಳು ಕಡ್ಡಾಯವಾಗಿ ಮೂಲಭೂತ ಸೌಲಭ್ಯಗಳನ್ನು ಹೊಂದಿರಬೇಕೆಂದು ಹಾಗೂ ಇನ್ನು ಮುಂದೆ ಕ್ಲಬ್‌ಗಳು ಅಗತ್ಯ ಮೂಲಭೂತ ಸೌಲಭ್ಯಗಳನ್ನು ಹೊಂದಿದ್ದರೆ ಮಾತ್ರ ಪರವಾನಗಿ ನೀಡಲು ಅಥವಾ ನವೀಕರಿಸಲು ಕ್ರಮಕೈಗೊಳ್ಳುವ ಬಗ್ಗೆ ಪರಿಶೀಲಿಸುವುದು.

12. ಹೊಸ ಬಡಾವಣೆ ನಿರ್ಮಾಣ ಮಾಡಲು ಅನುಮತಿ ನೀಡುವ ಸಂದರ್ಭದಲ್ಲಿಯೇ ಆ ಬಡಾವಣೆಯಲ್ಲಿ ಕ್ಲಬ್ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಿಗೆ ಅನುಕೂಲವಾಗುವಂತೆ ಸ್ಥಳ ನಿಗಧಿಪಡಿಸುವ ಬಗ್ಗೆ ಪರಿಶೀಲಿಸುವುದು.

13. 25 ಎಕರೆಗಿಂತ ಮೇಲ್ಪಟ್ಟ ಜಮೀನಿನಲ್ಲಿ ಮುಂದೆ ರಚಿಸಲಾಗುವ ಬಡಾವಣೆಗಳಲ್ಲಿ ಆ ಬಡಾವಣೆಯ ನಿವಾಸಿಗಳಿಗೆ ಅನುಕೂಲವಾಗುವಂತೆ ಕ್ಲಬ್‌ನ್ನು ಸ್ಥಾಪಿಸಲು ಸ್ಥಳಾವಕಾಶವನ್ನು ಮೀಸಲಿಡುವಂತೆ Karnataka Town and Country Planning Act ನ್ನು ತಿದ್ದುಪಡಿ ಮಾಡುವ ಕುರಿತು ಪರಿಶೀಲಿಸುವುದು.

14. ಪ್ರತಿಯೊಂದು ತಾಲ್ಲೂಕಿನಲ್ಲೂ ಕ್ಲಬ್ ನಿರ್ಮಿಸಲು ಸರ್ಕಾರದ ವತಿಯಿಂದ ಜಾಗ ನೀಡುವ ಕುರಿತು ಪರಿಶೀಲಿಸುವುದು.

15. ಸಮಿತಿಯು ಅಧ್ಯಯನ ನಡೆಸಿ ಒಟ್ಟಾರೆಯಾಗಿ ತೀರ್ಮಾನಿಸಿದಂತೆ ರಾಜ್ಯದಲ್ಲಿನ ಕ್ಲಬ್‌ಗಳ ಕಾರ್ಯವೈಖರಿ ಮತ್ತು ಚಟುವಟಿಕೆಗಳನ್ನು ಕಾನೂನು ಬದ್ಧವಾಗಿ ನಿಯಂತ್ರಿಸಲು ( The Karnataka Regulation of Entry to Public Places and Regulation of Clubs Bill- 2020) ವಿಧೇಯಕವನ್ನು ಮಂಡಿಸಿ ಸೂಕ್ತ ಕಾನೂನು ಜಾರಿಗೆ ತರುವ ಬಗ್ಗೆ ಪರಿಶೀಲಿಸುವುದು.

16. ಸಮಿತಿಯು ಅವಶ್ಯಕವಿದ್ದಲ್ಲಿ ಪರಿಶೀಲಿಸಬಹುದಾದ ಇತರೆ ಅಂಶಗಳು

**ಕೆ.ಆರ್.ಮಹಾಲಕ್ಷ್ಮಿ**
**ಕಾರ್ಯದರ್ಶಿ**

**ವಿಧಾನ ಪರಿಷತ್ತಿನ ಎಲ್ಲಾ ಮಾನ್ಯ ಶಾಸಕರುಗಳಿಗೆ**

**www.kla.kar.nic.in/council /council.htm**